# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 253 | Pages. 2 | Date: 21-08-2025, THURSDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 253 - ಪುಟಗಳು : 2 21-08-2025 ಗುರುವಾರ | Ph: 8762954248 | ದರ : ₹1


# ಸಾಮಾಜಿಕ ಕ್ರಾಂತಿಯ ಹರಿಕಾರ ಡಿ. ದೇವರಾಜ ಅರಸು

## ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಬಣ್ಣನೆ : ರಾಜಕೀಯ ಮುತ್ಸದ್ದಿ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಮಾಜಿಕ ಕ್ರಾಂತಿಯ ಹರಿಕಾರ, ಆರ್ಥಿಕ ಮತ್ತು ಸಾಮಾಜಿಕವಾಗಿ ಸದೃಢವಾದಂತಹವರನ್ನುಎದುರಾಕಿಕೊಂಡು ಬಡವರು, ಹಿಂದುಳಿದವರು, ತುಳಿತಕ್ಕೊಳಗಾದವರ ಪರ ಕಾಳಜಿಯನ್ನು ತೋರಿಸಿ ಅನೇಕ ಯೋಜನೆಗಳನ್ನು ಜಾರಿಗೆ ತಂದು ಅವರ ಏಳಿಗೆಗೆ ಶ್ರಮಿಸಿದ ಮಹಾನ್ ನಾಯಕರು ಡಿ.ದೇವರಾಜ ಅರಸು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಬುಧವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುಅವರ 110ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಅರಸು ನಾಯಕತ್ವ ಗುಣವುಳ್ಳ ಮಹಾನ್ ಸಾಧಕರಾಗಿದ್ದಾರೆ. ತಮಗೆ ಸಿಕ್ಕ ಅಧಿಕಾರವನ್ನು ಸಮಾಜದ ಏಳಿಗೆಗಾಗಿ ಬಳಸಿಕೊಂಡವರು. ಸಮಾಜದಲ್ಲಿದ್ದಂತಹ ಮಲ ಹೊರುವ ಪದ್ಧತಿಯನ್ನು ಹೋಗಲಾಡಿಸಿ, ಬಡವರಿಗೆ ಭೂಮಿ, ಕಾರ್ಮಿಕರಿಗೆ ಸೂರು ಒದಗಿಸಿ ಸಾಮಾಜಿಕ ಕ್ರಾಂತಿಯನ್ನು ಮಾಡಿ, ಶತಶತಮಾನಗಳಲ್ಲೂ ತಮ್ಮ ಹೆಸರು ಉಳಿಯುವ ರೀತಿಯಲ್ಲಿ ಕೆಲಸಗಳನ್ನು ಮಾಡಿದವರು ಅರಸು ಎಂದರು.

### ವಿದ್ಯಾರ್ಥಿಗಳು ಇತಿಹಾಸ ಅರಿಯಿರಿ

ಕರ್ನಾಟಕದಇತಿಹಾಸದಲ್ಲಿ ಯಾವಾಗಲೂ ಅಗ್ರಗಣ್ಯ ಸ್ಥಾನದಲ್ಲಿ ಅರಸು ಇರುತ್ತಾರೆ. ಇವರ ಸಾಧನೆಗಳ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳಿ ಮತ್ತು ಅವರ ನಾಯಕತ್ವ ಗುಣವನ್ನು ರೂಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ಕರ್ನಾಟಕದ ಅಭಿವೃದ್ಧಿಯ ಹರಿಕಾರರು, ರಾಜಕೀಯ ಇಚ್ಛಾಶಕ್ತಿ ಉಳ್ಳವರು, ರಾಜ್ಯಕ್ಕೆ ಕರ್ನಾಟಕಎಂದು ಮರುನಾಮಕರಣ ಮಾಡಿದ ಕೀರ್ತಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿರುವ ಎಲ್ಲರೂ ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರಿಯಬೇಕೆಂಬ ಭಾವನೆಯಿಂದ 1973ರಲ್ಲಿ ಉಳುವವನೇ ಭೂಮಿಯ ಒಡೆಯ ಎನ್ನುವ ಕಾನೂನನ್ನು ಜಾರಿಗೊಳಿಸುವ ಮೂಲಕ ಲಕ್ಷಾಂತರ ಕುಟುಂಬಗಳ ಮನೆಯನ್ನು ಬೆಳಗಿದವರು. ನ್ಯಾಯಬೆಲೆ ಅಂಗಡಿಗಳನ್ನು ತೆರೆದವರು. ಜೊತೆಗೆ 518 ಹಾಸ್ಟೆಲ್ ಹಾಗೂ ಮಹಿಳೆಯರಿಗಾಗಿಯೇ ಪ್ರತ್ಯೇಕ ಹಾಸ್ಟೆಲ್



ತೆರೆದಿದ್ದಾರೆ. 15 ಲಕ್ಷ ವಿದ್ಯಾರ್ಥಿಗಳಿಗೆ ಅಂದಿನ ಕಾಲದಲ್ಲಿಯೇ ಮಧ್ಯಾಹ್ನದ ಉಪಹಾರದ ಯೋಜನೆ, ಸಾಲಮನ್ನಾ ಮಾಡುವುದಕ್ಕಾಗಿ ಋಣಭಾರ ಕಾಯ್ದೆ ಜಾರಿಗೆ ತಂದವರು ಎಂದು ಸ್ಮರಿಸಿದರು.

ಸಮಾಜದ ಜನರಿಗಾಗಿ ಅನೇಕ ರೀತಿಯ ಯೋಜನೆಗಳನ್ನು ಜಾರಿ ಮಾಡಿದವರು. ಸುಮಾರು 29 ವ?ಗಳ ಕಾಲ ಸಾರ್ವಜನಿಕ ಕ್ಷೇತ್ರದಲ್ಲಿದ್ದವರು. ಕಾರ್ಮಿಕ ಇಲಾಖೆ, ಸಾರಿಗೆ ಇಲಾಖೆ, ಪ್ರವಾಸೋದ್ಯಮ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಇಂದು ಇವರ ಕುರಿತಾಗಿ ಇವರ ಪರಿಚಯವನ್ನು ಮಕ್ಕಳಿಗೆ ತಿಳಿಸಲು ಒಂದು ಕಿರು ಪುಸ್ತಕವನ್ನು ಮಾಡಿ ಶಾಲಾ, ವಸತಿ ನಿಲಯದ ಎಲ್ಲಾ ಮಕ್ಕಳಿಗೆ ಹಂಚಲು ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಎಲ್ಲರೂ ಅರಸು ಜೀವನ ಚರಿತ್ರೆ ಅರಿಯಬೇಕೆಂದು ಸಲಹೆ ನೀಡಿದರು.

ಸಾಹಿತಿ ಎಂ.ಜಿ. ಪರಮೇಶ್ ಮಡಬಲು ಮಾತನಾಡಿ, ಎರಡು ಬಾರಿ ಮುಖ್ಯಮಂತ್ರಿಯಾಗಿ, ದೀನ ದಲಿತರ ಹಿಂದುಳಿದ ವರ್ಗಗಳ, ಶೋಷಿತ ಸಮುದಾಯದವರ, ಅಲ್ಪಸಂಖ್ಯಾತರ, ರೈತರ, ಕೂಲಿ ಕಾರ್ಮಿಕರ ಆಶಾ ಕಿರಣವಾಗಿ ಈ ರಾಜ್ಯಕ್ಕೆ ಭದ್ರಬುನಾದಿ ಹಾಕಿದವರು. ಗ್ರಾಮೀಣ ಹಳ್ಳಿಯಲ್ಲಿ ಹುಟ್ಟಿ ಬಡತನದ ಹಾದಿಯನ್ನು ಎದುರಿಸಿ ಬೆಳೆದು ಬಂದವರಾಗಿದ್ದಾರೆ. ಹುಣಸೂರು



ವಿಧಾನಸಭಾಕ್ಷೇತ್ರದಿಂದ ಹೆಚ್ಚಿನ ಅಂತರದಲ್ಲಿ ಆಯ್ಕೆಯಾಗಿ ರಾಜಕೀಯ ಕ್ಷೇತ್ರಕ್ಕೆ ಧುಮುಕಿದವರು ದೇವರಾಜು ಅರಸು ಅವರುಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಕುಮಾರ್, ಸಂದೇಶ್ ಹಾಜರಿದ್ದರು.

## ಅದ್ದೂರಿ ಮೆರವಣಿಗೆಗೆ ಚಾಲನೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಸಾಮಾಜಿಕ ಕ್ರಾಂತಿಯ ನೇತಾರ, ಪರಿವರ್ತನೆಯ ಹರಿಕಾರ ಹಾಗೂ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ಅಂಗವಾಗಿ ಅದ್ದೂರಿ ಮೆರವಣಿಗೆ ಏರ್ಪಡಿಸಲಾಗಿತ್ತು. ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರು ಅರಸು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

# ಒಳ ಮೀಸಲಾತಿ ವರ್ಗೀಕರಣ ಇಂದು ಮುಖಂಡರ ಸಭೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಸಮಾನವಾಗಿ ಹಂಚಿಕೆ ಮಾಡಿರುವುದು ಸ್ವಾಗತಾರ್ಹ. ಈ ಸಂಬಂಧ ಆ. 21 ರಂದು ನಗರದ ಪ್ರವಾಸಿ ಮಂದಿರದಲ್ಲಿ ಸಮುದಾಯದ ಮುಖಂಡರು, ಹೋರಾಟಗಾರರ ಸಭೆ ಕರೆಯಲಾಗಿದೆ ಎಂದು ಮಾದಿಗ ದಂಡೋರ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್. ವಿಜಯ್ ಕುಮಾರ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವರ್ಗೀಕರಣದಲ್ಲಿ ಸಣ್ಣಪುಟ್ಟ ಲೋಪಗಳಿವೆ. ಈ ಬಗ್ಗೆ ಸಮುದಾಯ ಮುಖಂಡರು ಕುಳಿತು ಚರ್ಚೆ ಮಾಡುವ ಸಲುವಾಗಿ ಸಭೆ ಕರೆಯಲಾಗಿದೆ. ಕಳೆದ 35 ವರ್ಷಗಳ ಹೋರಾಟಕ್ಕೆ ಜಯ ಸಿಕ್ಕಿರುವ ಖುಷಿ ಒಂದೆಡೆಯಾದರೆ ವರ್ಗೀಕರಣ ಸಂದರ್ಭದಲ್ಲಿ ಆಗಿರುವ ಲೋಪಗಳು ಬೇಸರ ತರಿಸಿವೆ ಎಂದು ತಿಳಿಸಿದರು.

ಒಳ ಮೀಸಲಾತಿ ಜಾರಿ ಗೊಂದಲದ ಗೂಡಾಗಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಸಚಿವ ಸಂಪುಟದ ಎಲ್ಲಾ ಸದಸ್ಯರು ಸಮಾನ ಮೀಸಲು ಹಂಚಿಕೆ ಸೂತ್ರಕ್ಕೆ ಒಪ್ಪಿಗೆ ನೀಡಿರುವುದಕ್ಕೆ ಸಮುದಾಯದ ಎಲ್ಲಾ ಮುಖಂಡರು ಧನ್ಯವಾದ ತಿಳಿಸಲಾಗುವುದು ಎಂದರು.

ಪರಿಶಿಷ್ಟ ಜಾತಿಗಳಲ್ಲಿ ಇರುವ ಸಣ್ಣ ಸಣ್ಣ ಸಮುದಾಯಗಳನ್ನು ಹಾಗೂ ಆರ್ಥಿಕವಾಗಿ ಅತೀ ಹಿಂದುಳಿದ ಸಮುದಾಯವನ್ನು ಒಂದು ಗುಂಪಿಗೆ ಸೇರಿಸಬೇಕು ಎಂಬ ಉದ್ದೇಶದಿಂದ ಪ್ರ.ವರ್ಗ ಎ.ಗೆ ಸೇರಿಸಿ ಮಾದಿಗ ಸಮುದಾಯ ಪ್ರ. ವರ್ಗ ಬಿ. ಗೆ ಸೇರಿಸಿ ನ್ಯಾಯ ಒದಗಿಸಬೇಕು. ಜೊತೆಗೆ ಅಲೆಮಾರಿ ಸಮುದಾಯವನ್ನೂ ಪ್ರ. ವರ್ಗ ಬಿ. ಯಿಂದ ತೆಗೆದುಹಾಕಿ ಅನ್ಯಾಯ ಮಾಡಿದೆ ಇದರ ಬಗ್ಗೆಯೂ ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿದರು.

ಮಾದಿಗ ದಂಡೋರ ಸಂಘಟನೆಯ ರಾಜ್ಯ ಕಾರ್ಯದರ್ಶಿ ಜಾವಗಲ್ ಇಂದ್ರೇಶ್, ಜಿಲ್ಲಾಧ್ಯಕ್ಷ ರವೀಶ್ ಬಸವಪುರ ಇದ್ದರು.

# ನಾಡು-ನುಡಿ ರಕ್ಷಣೆಗೆ ಕರವೇ ಕಟಿಬದ್ಧ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ರಾಜಧಾನಿ ಬೆಂಗಳೂರಿನಲ್ಲಿ ಅನ್ಯ ಭಾಷಿಕರ ದಬ್ಬಾಳಿಕೆಯಿಂದ ಕನ್ನಡ ನಾಡು ನುಡಿ ಸಂಸ್ಕೃತಿಗೆ ಒದಗಿದ್ದ ಧಕ್ಕೆಯನ್ನು ಸರಿಪಡಿಸುವ ಸಲುವಾಗಿ ಆರಂಭಗೊಂಡ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯದ ಉದ್ದಗಲಕ್ಕು ಪಸರಿಸಿದ್ದು ತನ್ನದೇಯಾದ ಶಕ್ತಿಯನ್ನು ಉಳಿಸಿಕೊಂಡಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಸಿ.ಡಿ. ಮನುಕುಮಾರ್ ಹೇಳಿದರು.


ಪಟ್ಟಣದ ಹೇಮಾವತಿ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಕರ್ನಾಟಕ ರಕ್ಷಣಾ ವೇದಿಕೆ ಹಮ್ಮಿಕೊಂಡಿದ್ದ ಗ್ರಾಮ ಮಟ್ಟದಲ್ಲೂ ಕರವೇ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕರವೇ ಯಾವುದೇ ಜಾತಿ ಧರ್ಮಕ್ಕೆ ಅಂಟಿಕೊಂಡು ಬಂದಿಲ್ಲ, ಮುಖಂಡ ಟಿ.ಎ. ನಾರಾಯಣಗೌಡ ಅವರು ಚಾಲನೆ ನೀಡಿರುವ ಸಂಘಟನೆ ರಾಜ್ಯಾದ್ಯಂತ ಜನರ ಧ್ವನಿಯಾಗಿದೆ. ತಾಲ್ಲೂಕು ಅಧ್ಯಕ್ಷ ಓಹಿಲೇಶ್ ಅವರು ಕರವೇಯನ್ನು ಹೋಬಳಿ ಮಟ್ಟದಲ್ಲಿ ಸಂಘಟನೆ ಮಾಡಿ ಮತ್ತೊಂದು ಹೆಜ್ಜೆ ಮುಂದೆ ಇಟ್ಟು ಇದೀಗ ಗ್ರಾಮ ಮಟ್ಟದಲ್ಲಿ ಸಂಘಟನೆ ಮಾಡುವ ಮೂಲಕ ಸಂಘಟನೆಗೆ ಮತ್ತ?ಟು ಶಕ್ತಿ ತುಂಬಲು ಮುಂದಾಗಿದ್ದಾರೆ. ಇಂದು ನಡೆಯುತ್ತಿರುವ ಸಭೆಯಲ್ಲಿ ಗ್ರಾಮ ಮಟ್ಟದಲ್ಲಿ ಸಂಘಟನೆ ಮಾಡಲು ಸಭೆ ನಡೆಸುತ್ತಿದ್ದು ಗ್ರಾಮೀಣ ಪ್ರದೇಶಗಳಿಂದ ಆಗಮಿಸಿರುವ ಆಸಕ್ತರು ಕರವೇ ಸಂಘಟನೆಯನ್ನು ನಿಮ್ಮಗಳ ಗ್ರಾಮಗಳಲ್ಲಿ ಆರಂಭಿಸಿ ಕರವೇ ಸಂಘಟನೆಗೆ ಮತ್ತ?ಟು ಶಕ್ತಿ ತುಂಬಬೇಕೆಂದು ಮನವಿ ಮಾಡಿದರು. ಸೆ. 2 ರಂದು ಜಿಲ್ಲಾ ಕೇಂದ್ರದಲ್ಲಿ ನಾರಾಯಣಗೌಡ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಸದಸ್ಯರ ಸಭೆ ಕರೆಯಲಾಗಿದ್ದು ಸಭೆಗೆ ಎಲ್ಲರೂ ಆಗಮಿಸಬೇಕು. ಕರವೇ ನಾಯಕತ್ವ ವಹಿಸಿಕೊಂಡಿರುವ ನಮ್ಮ ನಾರಾಯಣಗೌಡರು ರಾಜ್ಯ ಹಲವಾರು ಕ್ಲಿ?ಟ ಸಮಸ್ಯೆಗಳನ್ನು ಹೋರಾಟದ ಮೂಲಕ ಪರಿಹರಿಸಿರುವ ಅನೇಕ ಉದಾಹರಣೆ ನೀಡಿದರು. ಕರವೇ ತಾಲ್ಲೂಕು ಮಾಜಿ ಅಧ್ಯಕ್ಷ ಕೆರಗೋಡು ಮಹೇಶ್ ಮಾತನಾಡಿ, 2009ರಲ್ಲಿ ಕರವೇ ಆರಂಭಿಸಲಾಯಿತು. ಅಂದು ತಮಗೆ ತಾಲ್ಲೂಕಿನ ಜನತೆ ಮತ್ತು ಸಂಘಟನೆಯ ಕಾರ್ಯಕರ್ತರು ತಮಗೆ ನ್ನೆಲುಬಾಗಿ ನಿಂತ ಕಾರಣದಿಂದ ತಾವು ಸಹ ಹಲವಾರು ವ?ಗಳ ಕಾಲ ಹೊಳೆನರಸೀಪುರ ತಾಲೂಕಿನಲ್ಲಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿ ಇದೀಗ ತಮ್ಮನ್ನು ಗುರುತಿಸಿರುವ ಜಿಲ್ಲಾ ಕರವೆಯಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಕಾರಣವಾಗಿದೆ ಎಂದರು. ಕರವೇ ಜಿಲ್ಲಾ ಉಪಾಧ್ಯಕ್ಷ ಸೀತಾರಾಮ್, ತಾಲ್ಲೂಕು ರೇವಣ್ಣ, ರಂಗಸ್ವಾಮಿ, ಮಲ್ಲಿಕಾರ್ಜುನ್, ಧರ್ಮರಾಜ್, ದಯಾನಂದ್, ಕುಮಾರ್ ಇತರರಿದ್ದರು.

# 8 ಲಕ್ಷ ಗೇಣಿದಾರರಿಗೆ ಭೂಮಿ ಒದಗಿಸಿದ ಅರಸು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಭೂಸುಧಾರಣಾ ಕಾಯ್ದೆ ಜಾರಿಗೊಳಿಸುವ ಮೂಲಕ 8 ಲಕ್ಷ ಗೇಣಿದಾರರಿಗೆ ಭೂಮಾಲಿಕರಿಂದ ಭೂಮಿಯನ್ನು ಕೊಡಿಸುವಲ್ಲಿ ದೇವರಾಜು ಅರಸು ಪ್ರಮುಖ ಪಾತ್ರ ವಹಿಸಿದ್ದರು ಎಂದು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ದೇವರಾಜು ತಿಳಿಸಿದರು.

ತಾಲ್ಲೂಕು ಆಡಳಿತದಿಂದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಡಿ. ದೇವರಾಜು ಅರಸು ಅವರ 110ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿ, ಸಾಮಾಜಿಕ ನ್ಯಾಯ ಮತ್ತು ಪರಿವರ್ತನೆಯ ಹರಿಕಾರ ಹಾಗೂ ಸಾಧನೆಯ ಸರದಾರ ಮಾಜಿ ಮುಖ್ಯಮಂತ್ರಿ ದಿವಂಗತ ಡಿ ದೇವರಾಜು ಅರಸು ಅವರು ಮುಖ್ಯಮಂತ್ರಿ ಆಗಿದ್ದಾಗ ಜೀತ ಪದ್ಧತಿ ನಿರ್ಮೂಲನೆ ಸೇರಿದಂತೆ ಋಣಮುಕ್ತ ಕಾಯ್ದೆಯನ್ನು ಜಾರಿಗೆ



ತಂದು ಸಾಲ ಮನ್ನಾ ಮಾಡಿ ಬಡ ಜನತೆಗೆ ಅನುಕೂಲ ಮಾಡಿದರು. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿ ವಿದ್ಯಾರ್ಥಿ ನಿಲಯಗಳನ್ನು ರಾಜ್ಯದ್ಯಂತ ತೆರೆದು ಲಕ್ಷಾಂತರ ವಿದ್ಯಾರ್ಥಿಗಳ ಭವಿ?ಕ್ಕೆ ದಾರಿ ದೀಪವಾದರು.

ಮಾಜಿ ಪ್ರಧಾನಿ ದಿ. ಇಂದಿರಾ ಗಾಂಧಿ ಅವರು ಜಾರಿಗೆ ತಂದಂತಹ 20 ಅಂಶಗಳ ಕಾರ್ಯಕ್ರಮವನ್ನು ಯಥಾವತ್ತಾಗಿ ಅನು?ಾನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನೀರಾವರಿ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ ಮಾಡಿದ ಅರಸು ಅವರು ಅಂದಿನ ವಿರೋಧಪಕ್ಷದ ನಾಯಕರ ಮೆಚ್ಚುಗೆಗೂ ಪಾತ್ರರಾದರು.

ಮೈಸೂರು ಸಂಸ್ಥಾನದಲ್ಲಿ ಅವರು ಮುಖ್ಯಮಂತ್ರಿಯಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸುವುದಕ್ಕೆ ಅವರಿಗೆ ಪೂರಕವಾಗಿ ಸಾಹುಕಾರ್ ಚನ್ನಯ್ಯನವರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್ ನಿಜಲಿಂಗಪ್ಪರವರು ಸಾತ್ ನೀಡಿ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಅವರು ವಿಧಾನಸಭೆಗೆ ಆಯ್ಕೆಯಾಗಲು ಸಹಕರಿಸಿದರು. ಅವರ ಹಾದಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಸಾಗುತ್ತಿರುವುದು ಹೆಮ್ಮೆಯ ವಿಷಯ ಎಂದರು.


1969 ರಿದ 1979 ರವರೆಗೆ ಅರಸು ಯುಗ ಎಂದೆ ಮನೆ ಮಾತಾಗಿದೆ. ಕನ್ನಡ ನಾಡು ನುಡಿಗೆ ಹೆಚ್ಚು ಒತ್ತು ನೀಡಿದ ಅವರು 1972 ನೇ ಇಸವಿಯಲ್ಲಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲು ಕಾರಣೀಭೂತರಾದರು ಎಂದು ನುಡಿದರು.

ತಹಸಿಲ್ದಾರ್ ವೈ. ಎಂ. ರೇಣು ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ ಅಹಿಂದ ವರ್ಗಕ್ಕೆ ಅರಸುವವರ ಕೊಡುಗೆ ಅಪಾರ. ವಿದ್ಯಾರ್ಥಿಗಳು ಅವರ ಸೇವೆಯನ್ನು ಸದಾ ಸ್ಮರಿಸುವುದರ ಮೂಲಕ ತಮ್ಮ ಬದುಕನ್ನು ಮಾದರಿಯಾಗಿ ರೂಪಿಸಿಕೊಳ್ಳಬೇಕು ಎಂದರು.

ಅರಸು ಅವರ ಜನ್ಮ ದಿನಾಚರಣೆ ಪ್ರಯುಕ್ತ ಅವರು ಸ್ಥಾಪನೆ ಮಾಡಿರುವ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಲವು ಕ್ರೀಡಾಕೂಟಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮುನಿರಾಜು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೃ?ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಟಿ. ಲಕ್ಷ್ಮಣ, ಆರಕ್ಷಕ ವೃತ್ತ ನಿರೀಕ್ಷಕ ಪ್ರದೀಪ್, ವಿವಿಧ ಇಲಾಖೆಯ ಅಧಿಕಾರಿಗಳಾದ ಸೋಮಶೇಖರ್, ಧನಲಕ್ಷ್ಮಿ, ಪ್ರೇಮ ಇತರರಿದ್ದರು.

# ಟ್ರ್ಯಾಕ್ಟರ್ ಪಲ್ಟಿಯಾಗಿ ಯುವಕ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಕೊಣನೂರು: ಟ್ರ್ಯಾಕ್ಟರ್ ಪಲ್ಟಿಯಾಗಿ ಯುವಕ ಮೃತಪಟ್ಟಿದ್ದು ರೀಲ್ಸ್ ಮಾಡುವಾಗ ಅವಘಡ ಸಂಭವಿಸಿದೆ ಎಂದು ತಿಳಿದುಬಂದಿದೆ.


ಅರಕಲಗೂಡು ತಾಲ್ಲೂಕು ವಿ.ಜಿ. ಕೊಪ್ಪಲು ಗ್ರಾಮದ ಕಿರಣ್‌ಕುಮಾರ್ ಮೃತ ಯುವಕ. ಕೊಣನೂರು ಹೋಬಳಿ ಕಬ್ಬಳಿಗೆರೆ ಬೆಟ್ಟದ ಮೇಲೆ ಬುಧವಾರ ಘಟನೆ ನಡೆದಿದೆ. ಸ್ನೇಹಿತರೊಂದಿಗೆ ರೀಲ್ಸ್ ಮಾಡಲೆಂದು ಬೆಟ್ಟಕ್ಕೆ ಬಂದಿದ್ದರು. ಏಕಾಏಕಿ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ ಪಲ್ಟಿಯಾಗಿದೆ. ಮೊಬೈಲ್‌ನಲ್ಲಿ ವಿಡಿಯೋ ಮಾಡುತ್ತಿದ್ದ ಯುವಕರು ಘಟನೆಯಿಂದ ಹೆದರಿ ಓಡಿಹೋಗಿದ್ದಾರೆಂದು ಸ್ಥಳೀಯರು ಹೇಳಿದರು. ಕೊಣನೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

## 1.35 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಹಾಸನ: ನಗರದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಚಿನ್ನಾಭರಣವಿದ್ದ ಮಹಿಳೆಯೊಬ್ಬರ ಸೂಟ್‌ಕೇಸ್‌ನೊಂದಿಗೆ ಅಪರಿಚಿತ ನಾಪತ್ತೆಯಾಗಿರುವ ಘಟನೆ ಇತ್ತೀಚೆಗೆ ನಡೆದಿದೆ.

ತುಮಕೂರಿನ ಲೋಕೇಶ್ ಎಂಬುವವರು ಮಂಗಳೂರಿಗೆ ತೆರಳುತ್ತಿದ್ದರು. ಆ. 17ರ ರಾತ್ರಿ 10.30ರ ಸಮಯದಲ್ಲಿ ಹಾಸನ ಬಸ್ ನಿಲ್ದಾಣದಲ್ಲಿ ಬಸ್ ಇಳಿಯುತ್ತಿದ್ದಾಗ ಮರೆತು ಸೂಟಕೇಸ್ ಅನ್ನು ಸೀಟ್ ಮೇಲೆಯೇ ಬಿಟ್ಟು ಕೆಳಗಿಳಿದಿದ್ದರು. ಹಿಂದಿನಿಂದ ಬರುತ್ತಿದ್ದ ವ್ಯಕ್ತಿಯೊಬ್ಬ ಸೂಟ್‌ಕೇಸ್ ತರುತ್ತಿರುವುದಾಗಿ ಹೇಳಿದ್ದರಿಂದ ಬಾಗಿಲಲ್ಲೇ ನಿಂತಿದ್ದರು. ಆದರೆ ಆತ ಬ್ಯಾಗ್ ಕೊಡದೆ ನಾಪತ್ತೆಯಾಗಿದ್ದಾನೆ. 1.35 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿದ್ದು ಹುಡುಕೊಡಬೇಕೆಂದು ಬಡಾವಣೆ ಠಾಣೆಗೆ ದೂರು ಸಲ್ಲಿಸಿದ್ದಾರೆ.

# ಡಿಜೆ ಹೊರತುಪಡಿಸಿ ಬೇರೆ ಧ್ವನಿವರ್ಧಕ ಬಳಸಬಹುದು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನಲ್ಲಿ ಗಣೇಶೋತ್ಸವ ಸಂದರ್ಭದಲ್ಲಿ ಡಿಜೆ ಬಳಕೆಗೆ ಮಾತ್ರ ಸರ್ಕಾರದಿಂದ ನಿಷೇಧವಿದ್ದು, ಧ್ವನಿವರ್ಧಕ ಬಳಕೆಗೆ ಯಾವುದೇ ರೀತಿಯ ನಿರ್ಬಂಧವಿಲ್ಲ ಎಂದು ಡಿವೈಎಸ್‌ಪಿ ಪ್ರಮೋದ್ ಕುಮಾರ್ ಹೇಳಿದರು. ಪಟ್ಟಣದ ರೈತ ಭವನದಲ್ಲಿ ಗಣೇಶೋತ್ಸವ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿ ಆಯೋಜಕರ ಸಭೆಯಲ್ಲಿ ಮಾತನಾಡಿ, ಸರ್ಕಾರ ಅನುಮತಿಸದ ಡಿಜೆ ಹೊರತುಪಡಿಸಿ ಇತರ ಧ್ವನಿ ವರ್ಧಕ ಹಾಗೂ ವಾದ್ಯ ವೃಂದಗಳ ಮೂಲಕ ಉತ್ಸವ ಆಚರಿಸಿಕೊಳ್ಳಬಹುದು. ಇದಕ್ಕೆ ಪೊಲೀಸ್ ಇಲಾಖೆ ಯಾವುದೇ ಅಡಚಣೆ ಮಾಡುವುದಿಲ್ಲ. ಆದರೆ ಸರ್ಕಾರ ವಿಧಿಸಿರುವ ಮಾನದಂಡಗಳ ಪ್ರಕಾರವೇ ಅನುಮತಿಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಉತ್ಸವ ನಡೆಯುವ ಸ್ಥಳದಲ್ಲಿ ಆಯೋಜಕರು ಸ್ವತಃ ಮುಂಜಾಗ್ರತಾ ಕ್ರಮವಾಗಿ ಸಿಸಿ ಕ್ಯಾಮೆರಾ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ಉತ್ಸವದ ಆವರಣದಲ್ಲಿ ಧ್ವನಿವರ್ಧಕ ಬಳಸಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ಯಾವುದೇ ನಿಷೇಧವಿಲ್ಲ. ಆಚರಣೆಗಳು ನಮಗೆ ಸಂತೋಷ ನೀಡಬೇಕು ಹೊರತು ಇತರರಿಗೆ ತೊಂದರೆ ಉಂಟುಮಾಡಬಾರದು. ವಿಸರ್ಜನೆ ವೇಳೆ ಅನಾಹುತಗಳನ್ನು ತಪ್ಪಿಸಲು ಆಯೋಜಕರು ಸ್ವತಃ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಡಿಜೆ ಬಳಕೆಗೆ ಮಾತ್ರ ನಿಷೇಧವಿದ್ದು, ಮುಂದಿನ ದಿನಗಳಲ್ಲಿ ಸರ್ಕಾರ ಡಿಜೆ ಬಳಕೆಗೆ ಅನುಮತಿ ನೀಡಿದರೆ ನಮಗೆ ಯಾವುದೇ ತಕರಾರು ಇರುವುದಿಲ್ಲ ಎಂದರು. ನಗರ ಪೊಲೀಸ್ ಠಾಣೆ ಪಿಎಸ್‌ಐ ಮಹೇಶ್, ಗ್ರಾಮಾಂತರ ಠಾಣೆ ಪಿಎಸ್‌ಐ ಪ್ರಸನ್ನ, ಟಿಎಪಿಸಿಎಂಎಸ್ ಅಧ್ಯಕ್ಷ ಶಶಿಕುಮಾರ್, ಪಿಎಸ್‌ಐ ಸರ್ದಾರ್ ಪಾಷಾ, ಯಸಳೂರು ಪಿಎಸ್‌ಐ ಶ್ರೀನಿವಾಸ್, ಸೆಸ್ಕ್ ಸಹಾಯಕ ಅಭಿಯಂತರ ಹರೀಶ್, ಆನೆಮಹಲ್ ಗ್ರಾಪಂ ಪಿಡಿಒ ಹರೀಶ್ ಇತರರಿದ್ದರು.

# ಪ್ರೀತಿ ಕೊಂದ ಕೊಲೆಗಾರ..?

## ಮದುವೆಯಾಗಲು ನಿರಾಕರಿಸಿದ ಗೆಳತಿಯನ್ನು ಕಾರು ಸಮೇತ ಕೆರೆಗೆ ತಳ್ಳಿದ ದುರುಳ ಪ್ರೇಮಿ ಪೊಲೀಸ್ ವಶಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಕೆರೆಗೆ ಕಾರು ಉರುಳಿ ಮಹಿಳೆ ಸಾವು ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದ್ದು ಅದು ಆಕ್ಸಿಡೆಂಟ್ ಅಲ್ಲ ಕೊಲೆ ಎನ್ನುವುದು ಪೊಲೀಸರ ತನಿಖೆಯಿಂದ ಬೆಳಕಿಗೆ ಬಂದಿದೆ.

ಇಂತಹದ್ದೊಂದು ಘಟನೆ ನಡೆದಿರೋದು ಬೇಲೂರು ತಾಲೂಕಿನ ಚಂದನಹಳ್ಳಿಯಲ್ಲಿ. ವಿವಾಹಿತ ಮಹಿಳೆ ಪ್ರೀತಿ ನಿರಾಕರಿಸಿದ್ದಕ್ಕೆ, ಸಿನಿಮೀಯ ರೀತಿಯಲ್ಲಿ ಕಾರನ್ನು ಕೆರೆಗೆ ತಳ್ಳಿ ಮಹಿಳೆ ಹತ್ಯೆ ಮಾಡಿರೋ ಆರೋಪ ಕೇಳಿಬಂದಿದೆ.

ಬೇಲೂರಿನ ಶ್ವೇತಾ(32) ಕೊಲೆಯಾದ ಮಹಿಳೆ. ಹಲವು ವರ್ಷಗಳಿಂದ ಪರಿಚಿತನಾಗಿದ್ದ ವ್ಯಕ್ತಿ ಜೊತೆ ಶ್ವೇತಾ ಗೆಳೆತನ ಹೊಂದಿದ್ದಳು. ತಾನು ಪತ್ನಿ ಬಿಟ್ಟು ಬರ್ತೀನಿ ನೀನು ನನ್ನೊಟ್ಟಿಗೆ ಬಾ ಎಂದು ರವಿ ಪೀಡಿಸುತ್ತಿದ್ದನಂತೆ,



ಶ್ವೇತಾ ಗಂಡನಿಂದ ದೂರವಾಗಿ ತಂದೆ ತಾಯಿ ಜೊತೆ ನೆಲೆಸಿದ್ದರು.

ಶ್ವೇತಾ, ರವಿಯ ಒತ್ತಾಯ ನಿರಾಕರಿಸಿದ್ದರಿಂದ ಪ್ರೀತಿ ನಿರಾಕರಿಸಿದ್ದಕ್ಕೆ ಕೆರೆಗೆ ತಳ್ಳಿ ಕೊಲೆ ಮಾಡಿದ ಆರೋಪ ಕೇಳಿಬಂದಿದೆ. ರವಿ ನೆನ್ನೆ ಹಾಸನದಿಂದ ತನ್ನ ಕಾರಿನಲ್ಲಿ ಶ್ವೇತಾ ಕರೆತಂದಿದ್ದನು.

ಚಂದನಹಳ್ಳಿ ಕೆರೆಗೆ ಕಾರಿನ ಸಮೇತ ಶ್ವೇತಾ ಅವರನ್ನು ಕೆರೆಗೆ ಬೀಳಿಸಿ, ಕೊಲೆಮಾಡಿ ಬಳಿಕ ಆಕಸ್ಮಿಕವಾಗಿ ಕಾರು ಬಿದ್ದಿದೆ ಎಂದು ಕತೆ ಕಟ್ಟಿ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

ಶ್ವೇತಾ ಕುಟುಂಬ ಸದಸ್ಯರ ದೂರು ಆಧರಿಸಿ ಕೊಲೆ ಕೇಸ್ ದಾಖಲು ಮಾಡಿರುವ ಅರೇಹಳ್ಳಿ ಠಾಣೆ ಪೊಲೀಸರು ಆರೋಪಿ ರವಿಯನ್ನು ವಶಕ್ಕೆ ಪಡೆದಿದ್ದಾರೆ.

# ಜಿಲ್ಲೆಯಲ್ಲಿ ಹಾಕಿ ಟರ್ಫ್ ಕ್ರೀಡಾಂಗಣಕ್ಕೆ ಕೇಂದ್ರ ಸಚಿವರ ಸಮ್ಮತಿ

## 7.56 ಕೋಟಿ ರೂ. ಪ್ರಸ್ತಾವನೆ । ಹಣಕಾಸು ಇಲಾಖೆಗೆ ಸಲ್ಲಿಕೆಯಾಗಿರುವ ಕಡತ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಕ್ರೀಡಾಪಟುಗಳ ಅನುಕೂಲಕ್ಕಾಗಿ ಸುಸಜ್ಜಿತ ಹಾಕಿ ಟರ್ಫ್ ಕ್ರೀಡಾಂಗಣ ನಿರ್ಮಾಣಕ್ಕಾಗಿ ಅನುದಾನ ನೀಡಲು ಕೇಂದ್ರ ಕ್ರೀಡಾ ಸಚಿವರು ಒಪ್ಪಿಗೆ ಸೂಚಿಸಿದ್ದು ಹಣಕಾಸು ಇಲಾಖೆಯಿಂದಲೂ ಅನುಮೋದನೆ ದೊರೆಯುವ ನಿರೀಕ್ಷೆ ಹೆಚ್ಚಿದೆ.

ಶಾಸಕ ಹೆಚ್.ಪಿ. ಸ್ವರೂಪ್ ಅವರು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಮೂಲಕ ಕ್ರೀಡಾ ಹಾಗು ಯುವ ಸಬಲೀಕರಣ ವ್ಯವಹಾರಗಳ ಸಚಿವ ಡಾ. ಮನ್ಸುಖ್ ಮಾಂಡವೀಯ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದರು. ಕ್ರೀಡಾಂಗಣಕ್ಕಾಗಿ 30 ಕೋಟಿ ರೂ. ಅನುದಾನದ ಅವಶ್ಯಕತೆಯನ್ನು ಒತ್ತಿ ಹೇಳಿದ್ದರು. ಸಂಸದ ಶ್ರೇಯಸ್ ಪಟೇಲ್ ಸಹ ಆ. 4ರಂದು ಕೇಂದ್ರ ಸಚಿವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ. ಜಿಲ್ಲೆಯಲ್ಲಿ ಕ್ರೀಡಾಂಗಣಕ್ಕೆ ಅಗತ್ಯ ಭೂಮಿ ಲಭ್ಯವಿದೆ. ಜಿಲ್ಲೆಯ ಹಲವು ಆಟಗಾರರು ರಾಷ್ಟ್ರಮಟ್ಟದ ಮತ್ತು ಏಷ್ಯಾಕಪ್ ಸೇರಿ ಅನೇಕ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಕ್ರೀಡಾ ಸ್ಫೂರ್ತಿ ಮೆರೆದಿದ್ದಾರೆ. ಆದ್ದರಿಂದ ಶೀಘ್ರ ಹಾಕಿ ಟರ್ಫ್ ಕ್ರೀಡಾಂಗಣಕ್ಕೆ ಅನುಮೋದನೆ ನೀಡಬೇಕೆಂದು ಕೋರಿದ್ದರು.

ಜಿಲ್ಲೆಯ ಜನಪ್ರತಿನಿಧಿಗಳ ಒತ್ತಾಯವನ್ನು ಪರಿಗಣಿಸಿದ ಕೇಂದ್ರ ಸಚಿವಾಲಯ ಡಿಪಿಆರ್ ಸಲ್ಲಿಕೆಗೆ ಸೂಚಿಸಿದ್ದರು. ಆ ಹಿನ್ನಲೆಯಲ್ಲಿ ಜಿಲ್ಲೆಯ ಅಧಿಕಾರಿಗಳು ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿದ್ದರು.

### 7.56 ಕೋಟಿ ರೂ. ಕ್ರಿಯಾ ಯೋಜನೆ

ನಗರದ ಎಂ.ಜಿ. ರಸ್ತೆಯಲ್ಲಿರುವ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಕಿ ಟರ್ಫ್ ಕ್ರೀಡಾಂಗಣಕ್ಕೆ ಅಗತ್ಯ ಜಾಗವಿದೆ. ಅದಕ್ಕಾಗಿ ಸುಸಜ್ಜಿತ ಅಂಕಣ, ಪೆವಿಲಿಯನ್ ಬಿಲ್ಡಿಂಗ್, ಡ್ರೆಸ್ಸಿಂಗ್ ರೂಂ ನಿರ್ಮಿಸಬೇಕಿದೆ ಎಂದು ಅಧಿಕಾರಿಗಳು 7.56 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ಸಲ್ಲಿಸಲಾಗಿದೆ. ಕೇಂದ್ರ ಕ್ರೀಡಾ ಸಚಿವರಿಂದ ಸಕಾರಾತ್ಮಕ ಸ್ಪಂದನೆ ವ್ಯಕ್ತವಾಗಿದ್ದು ಹಣಕಾಸು ಇಲಾಖೆಯಿಂದ ಅನುಮೋದನೆ ಬಾಕಿಯಿದೆ.

> ಹಾಕಿ ಟರ್ಫ್ ಕ್ರೀಡಾಂಗಣಕ್ಕೆ 7.56 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದು ಕೇಂದ್ರ ಕ್ರೀಡಾ ಸಚಿವರು ಒಪ್ಪಿಗೆ ಸೂಚಿಸಿದ್ದಾರೆ. ಇನ್ನು ಅನುದಾನ ಬಿಡುಗಡೆಯಾಗಿಲ್ಲ. ಸದ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಸ್ವಚ್ಛತೆ, ಕುಡಿಯುವ ನೀರು ಸೇರಿ ಅಗತ್ಯ ಸೌಕರ್ಯ ಕಲ್ಪಿಸಲಾಗಿದೆ.
>
> **-ಸಿ.ಕೆ. ಹರೀಶ್, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ**

ಶೀಘ್ರದಲ್ಲೇ ಅನುದಾನ ಬಿಡುಗಡೆಯಾಗುವ ಸಾಧ್ಯತೆಯಿದ್ದು ಜಿಲ್ಲೆಯ ಕ್ರೀಡಾಪಟುಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

### ದೊರೆಯದ ಸಿಎಸ್ಆರ್ ಅನುದಾನ

ಜಿಲ್ಲಾ ಕ್ರೀಡಾಂಗಣ ಅಗತ್ಯ ಮೂಲಸೌಕರ್ಯಗಳಿಂದ ವಂಚಿತವಾಗಿದ್ದು ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಭರವಸೆಯನ್ನು ಹಿಂದಿನ ಜಿಲ್ಲಾಧಿಕಾರಿ ಸಿ. ಸತ್ಯಭಾಮ ನೀಡಿದ್ದರು. ಸಿಎಸ್ ಆರ್ ಅಥವಾ ದಾನಿಗಳಿಂದ ಕಬ್ಬಡ್ಡಿ ಅಂಕಣ ಸೇರಿ ಮತ್ತಿತರ ಕಾಮಗಾರಿ ಕೈಗೊಳ್ಳುವುದಾಗಿ ಹೇಳಿದ್ದರು. ಆ ನಿಟ್ಟಿನಲ್ಲಿ ಯಾವುದೇ ಕೆಲಸಗಳಾಗದೆ ಕ್ರೀಡಾಭಿಮಾನಿಗಳಿಗೆ ನಿರಾಸೆಯಾಗಿದೆ.

ಕ್ರೀಡಾಂಗಣದಲ್ಲಿ ಹಿರಿಯ ನಾಗರಿಕರಿಗೆ ಕುಡಿಯುವ ನೀರು, ವಿಶ್ರಾಂತಿ ಕಟ್ಟೆ ಮತ್ತು ಶೌಚಾಲಯ ವ್ಯವಸೆ ಕಲ್ಪಿಸಬೇಕಿದೆ. ಈಗ ಶಾಲಾ ಮಕ್ಕಳ ಕ್ರೀಡಾಕೂಟ ನಡೆಯುತ್ತಿರುವ ಹಿನ್ನಲೆಯಲ್ಲಿ ಕ್ರೀಡಾಂಗಣದಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಲಾಗಿದೆ. ಇಲ್ಲವಾದರೆ ಕ್ರೀಡಾಂಗಣ ಅನೈರ್ಮಲ್ಯದ ತಾಣವಾಗಿರುತ್ತದೆ. ಎಂಜಿ ರಸ್ತೆಯಲ್ಲಿನ ರಸ್ತೆಬದಿ ಅಂಗಡಿಗಳ ತ್ಯಾಜ್ಯವನ್ನೆಲ್ಲ ಜಿಲ್ಲಾ ಕ್ರೀಡಾಂಗಣದ ಕಾಂಪೌಡ್‌ಗೆ ಸುರಿಯುತ್ತಿರುವುದರಿಂದ ಸ್ವಚ್ಛತೆಗೆ ಆದ್ಯತೆ ನೀಡಬೇಕಿದೆ.

# ವಿದ್ಯಾನಗರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸದ್ಭಾವನಾ ದಿನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಾರತವು ವಿವಿಧತೆಯನ್ನು ಹೊಂದಿರುವ ರಾಷ್ಟ್ರವಾಗಿದ್ದರೂ ದೇಶದ ಎಲ್ಲರೂ ಒಂದೇ ಎಂಬ ಭಾವನೆ ಇದೆ. ಏಕತೆ, ಸಹಬಾಳ್ವೆಗೆ ನಮ್ಮ ದೇಶ ಹೆಸರುವಾಸಿಯಾಗಿದೆ. ಅದುವೇ ಸದ್ಭಾವನಾ ದಿನದ ವಿಶೇಷ ಎಂದು ವಿದ್ಯಾನಗರ ಪ್ರೌಢ ಶಾಲೆ ಮುಖ್ಯಶಿಕ್ಷಕ ಎನ್.ಜಿ. ಶ್ರೀಧರ್ ಹೇಳಿದರು.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸ್ಥಳೀಯ ಸಂಸ್ಥೆ ವತಿಯಿಂದ ನಗರದ ವಿದ್ಯಾನಗರ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಸದ್ಭಾವನ ದಿನ ಅಥವಾ ಸಾಮರಸ್ಯ ದಿನವನ್ನು ಭಾರತದ ಆರನೇ ಪ್ರಧಾನಿ ದಿ. ರಾಜೀವ್ ಗಾಂಧಿ ಅವರ ನೆನಪಿಗಾಗಿ ಆಚರಿಸುವ ನಿರ್ಧಾರ ಮಾಡಲಾಯಿತು. ರಾಜೀವ್ ಗಾಂಧಿ ತಮ್ಮ ಆಡಳಿತಾವಧಿಯಲ್ಲಿ ಮಹತ್ವದ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರ ಆದರ್ಶಗಳು ಮತ್ತು ಮೌಲ್ಯಗಳನ್ನು ಸ್ಮರಿಸಿ ಪ್ರೀತಿ ಸೌಹಾರ್ದತೆಯಿಂದ ಬಾಳಬೇಕೆಂಬುದೇ ಅವರ ಆಶಯವಾಗಿತ್ತು ಎಂದರು.

ಶಿಕ್ಷಕಿ ಶಾಂತಮ್ಮ ಮಕ್ಕಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನ ಕಾರ್ಯದರ್ಶಿ ಬಿ.ಎಸ್. ವನಜಾಕ್ಷಿ, ಶಿಕ್ಷಕರಾದ ಕೆ. ಗಾಯತ್ರಿ, ಎಂ.ಡಿ. ಕಮಲಾಕ್ಷ, ಪಂಕಜಾ ಇತರರಿದ್ದರು.

# ರೈತರ ನೆರವಿಗೆ ಸರ್ಕಾರ ಧಾವಿಸಬೇಕು: ಶಾಸಕ ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೆಂಗಳೂರು: ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಿಂದಾಗಿ ಕಾಫಿ, ಏಲಕ್ಕಿ, ಮೆಣಸು, ಅಡಿಕೆ ಸೇರಿದಂತೆ ಪ್ರಮುಖ ತೋಟಗಾರಿಕೆ ಬೆಳೆಗಳಿಗೆ ಭಾರೀ ಹಾನಿಯಾಗಿದೆ. ರೈತರು ಆರ್ಥಿಕ ಸಂಕದಲ್ಲಿ ಸಿಲುಕಿದ್ದು ಸರ್ಕಾರ ತಕ್ಷಣ ನೆರವಾಗಬೇಕು ಎಂದು ಶಾಸಕ ಸಿಮೆಂಟ್ ಮಂಜು ಸರ್ಕಾರದ ಗಮನ ಸೆಳೆದರು.

ಅಧಿವೇಶನದಲ್ಲಿ ಬುಧವಾರ ವಿಷಯ ಪ್ರಸ್ತಾಪಿಸಿದ ಅವರು, ಭಾರಿ ಗಾಳಿ ಮಳೆಯಿಂದ ಕಾಫಿ ಹಣ್ಣುಗಳು ಕಾಯಿ ಮತ್ತು ಅಡಿಕೆ ಬೆಳೆ ಹಂತದಲ್ಲೇ ನೆಲಕ್ಕೆ ಉದುರಿವೆ. ತೋಟಗಾರಿಕೆ ಬೆಳೆಗಳೊಂದಿಗೆ ಆಲೂರು ಮತ್ತು ಕಟ್ಟಾಯ ಭಾಗದ ಮೆಕ್ಕೆಜೋಳ ಬಿಳಿ ಸುಳಿ ರೋಗಕ್ಕೆ ತುತ್ತಾಗಿವೆ. ರೈತರು ನಿರಂತರ ನಕ್ಕೆ ಒಳಗಾಗುತ್ತಿದ್ದು, ಬದುಕು ಸಂಕಕ್ಕೆ ತಳ್ಳಲ್ಪಟ್ಟಿದೆ ಎಂದು ಹೇಳಿದರು.

ರೈತರ ನೆರವಿಗೆ ತಕ್ಷಣವೇ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿದ ಅವರು, ಎನ್ ಡಿಆರ್ಎಫ್ ಅಥವಾ ಎಸ್‌ಡಿಆರ್ಎಫ್ ನಿಧಿಯಿಂದ ತುರ್ತು ಪರಿಹಾರ ಘೋಷಿಸಿ ರೈತರನ್ನು ಪಾರು ಮಾಡಬೇಕು. ಕೃಷಿ ಇಲಾಖೆಯ ಅಧಿಕಾರಿಗಳು ತಕ್ಷಣ ಹಾನಿ ಅಂದಾಜು ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಬೇಕು ಎಂದು ಆಗ್ರಹಿಸಿದರು.

ಮಲೆನಾಡಿನ ಆರ್ಥಿಕ ಹಿನ್ನಡೆಯ ಕುರಿತು ಆತಂಕ ವ್ಯಕ್ತಪಡಿಸಿದ ಶಾಸಕ ಮಂಜು, ಕಾಫಿ, ಮೆಣಸು, ಅಡಿಕೆ ಮತ್ತು ಏಲಕ್ಕಿ ಬೆಳೆಗಳು ಗ್ರಾಮೀಣ ಆರ್ಥಿಕತೆಯ ಮೂಲಾಧಾರ. ಇವು ನಾಶವಾದರೆ ರೈತರ?ೇ ಅಲ್ಲ, ರಾಜ್ಯದ ಆರ್ಥಿಕತೆಯ ಮೇಲೂ ದು?ರಿಣಾಮ ಉಂಟಾಗಲಿದೆ. ಸರ್ಕಾರ ತಕ್ಷಣ ದಾವಿಸದಿದ್ದರೆ ಪರಿಸ್ಥಿತಿ ಹದಗೆಡುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಮಳೆ ಮತ್ತು ರೋಗಬಾಧೆಯಿಂದ ಹಾನಿಗೊಳಗಾದ ರೈತರ ಬದುಕು ಕಟ್ಟಿಕೊಳ್ಳಲು ತುರ್ತು ಪರಿಹಾರ ಮತ್ತು ಪುನಶ್ಚೇತನ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಎನ್. ಚಲುರಾಯಸ್ವಾಮಿ, ಪ್ರಸಕ್ತ ವರ್ಷದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಬೆಳೆಗಳು ನಾಶವಾಗಿ ಇಳುವರಿ ಕೂಡ ಕಡಿಮೆಯಾಗಿದೆ ಗಮನಕ್ಕೆ ಬಂದಿದೆ. ಆದ್ದರಿಂದ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆ ಜಂಟಿಯಾಗಿ ಸರ್ವೆ ನಡೆಸಿ ವರದಿ ನೀಡುವಂತೆ ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಂಡ ರಚನೆ ಮಾಡಲಾಗಿದ್ದು ಆದೇಶ ಹೊರಡಿಸಲಾಗಿದೆ. ವರದಿ ಬಂದ ನಂತರ ನವನ್ನು ತುಂಬಿಕೊಡುವ ನಿಟ್ಟಿನಲ್ಲಿ ಸರ್ಕಾರ ಸೂಕ್ತ ಕ್ರಮ ವಹಿಸಲಿದೆ ಎಂದು ವಿಧಾನಸಭೆಗೆ ತಿಳಿಸಿದರು.

# ಯೋಧರ ಸೇವೆ ಸಾರ್ಥಕತೆ-ತ್ಯಾಗದ ಸಂಕೇತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಯೋಧರ ಬದುಕು ಸಾರ್ಥಕತೆ ಹಾಗೂ ನಿಸ್ವಾರ್ಥ ಸೇವೆಯಿಂದ ಕೂಡಿರುತ್ತದೆ ಎಂದು ನಿವೃತ್ತ ಕಮಾಂಡರ್ ಎಂ.ಎಸ್. ಚಂದ್ರಶೇಖರ್ ಹೇಳಿದರು.

ನಗರದ ಸಂಸ್ಕೃತ ಭವನದಲ್ಲಿ ಸಂಸ್ಕೃತ ಸಂಘದಿಂದ ಆಯೋಜಿಸಿದ್ದ ಸಿಂದೂರ ರಕ್ಷಕ ರಕ್ಷಣಾಪಡೆ ವಿಶೇಷ ಮಾಹಿತಿ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತ ಹಿಂದಿನಿಂದಲೂ ವ್ಯಾಪಾರಕ್ಕಾಗಿ ಬಂದಂತಹ ಬೇರೆ ದೇಶದ ವ್ಯಕ್ತಿಗಳಿಂದ ಆಳಲ್ಪಟ್ಟಿದ್ದು ಅನೇಕ ಹೋರಾಟಗಳನ್ನು ಮಾಡುತ್ತಾ ಬಂದಿದೆ. ಅದರಲ್ಲಿ ವಿಜಯವನ್ನು ಸಾಧಿಸಿರುವುದು ಇದಕ್ಕೆಲ್ಲಾ ಭಾರತೀಯರಲ್ಲಿರುವ ಒಗ್ಗಟ್ಟು ಕಾರಣ. ನಮ್ಮ ರಾಷ್ಟ್ರ ಅತ್ಯುನ್ನತ ಸ್ಥಾನದಲ್ಲಿದೆ ಎಂದರೆ ಅದಕ್ಕೆ ನಮ್ಮ ಸದೃಢ ಸೇನೆಯೆ ಕಾರಣವಾಗಿದೆ ಎಂದರು.

ಯಾವುದೇ ಒಂದು ದೇಶ ಯುದ್ಧ ನಡೆಯಬೇಕಾದರೆ ಅಕ್ಕಪಕ್ಕದ ರಾಷ್ಟ್ರಗಳೆ ಶತ್ರುಗಳು. ಈ ಯುದ್ಧಗಳು ನಡೆಯಬಾರದಂತೆ ಸೈನ್ಯವು ಆದಷ್ಟೂ ತಡೆಯಲು ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತದೆ. ಯುದ್ಧಗಳು ಪ್ರಾರಂಭದಲ್ಲೇ ನಡೆಯುವುದಿಲ್ಲ. ಮೊದಲು ಸಂಧಾನ ಸೂತ್ರಗಳು ನಡೆಯುತ್ತವೆ. ಏನೇ ಆದರೂ ಸಂಧಾನ ಸೂತ್ರಗಳು ಯಶಸ್ವಿಯಾಗದಿದ್ದಾಗ ಕೊನೆಯಲ್ಲಿ ಮಾತ್ರ ಯುದ್ಧ ನಡೆಯಲು ಸೈನ್ಯ ಪ್ರವೇಶವಾಗುತ್ತದೆ ಎಂದರು.

ಕೆಲಮೊಂದು ಬಲಿಷ್ಠ ದೇಶಗಳು ಕನಿಷ್ಠ ದೇಶಗಳಿಗೆ ಸೌಕರ್ಯಗಳನ್ನು ಪೂರೈಕೆ ಮಾಡಿ ಆ ದೇಶಗಳನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಕೊನೆಗೆ ಆ ದೇಶವನ್ನೇ ಹಾಳು ಮಾಡುತ್ತವೆ. ಏನೇ ಆಗಲಿ ಒಂದು ದೇಶದ ಪರಿಸ್ಥಿತಿ ಸುವ್ಯವಸ್ಥಿತವಾದ ಮತ್ತು ಉತ್ತಮ ರೀತಿಯಲ್ಲಿ ನಡೆದುಕೊಂಡು ಹೋಗಬೇಕಾದರೆ ಆ ದೇಶದ ಸೈನಿಕರ ಮೇಲೆಯೇ ನಿಂತಿರುತ್ತದೆ ಎಂದು ನುಡಿದರು.

ವಿಜಯ ಶಾಲೆಯ ವಿದ್ಯಾರ್ಥಿನಿ ಡಿ.ಧನ್ವಿತಾ, ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾ ಶಾಲೆಯ ಡಿ. ತನ್ವಿಕಾ, ಶ್ರೀ ರಾಮಕೃಷ್ಣವಿದ್ಯಾಲಯದ ಕೃತಿಕಾ ಹಾಗೂ ಎಲೈಟ್ ಶಾಲೆಯ ಎಂ.ಎಂ.ಪ್ರಹರಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ನೀಡಿದರು. ಮಂಜುನಾಥ್ ಗಾಂವ್ಕರ ವಂದಿಸಿದರು. ಕು. ಅನ್ವಿತಾ ನಿರೂಪಿಸಿದರು.

# ಯೋಗಿಹಳ್ಳಿ ಗ್ರಾಮಕ್ಕೆ ಮೂಲಸೌಕರ್ಯ ಭರವಸೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಯೋಗಿಹಳ್ಳಿ ಗ್ರಾಮಕ್ಕೆ ಅಗತ್ಯ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಿರೀಶ್ ಅವರು ಭರವಸೆ ನೀಡಿದರು.

ರೈತ ಸಂಘದ ತಾಲ್ಲೂಕು ಅಧ್ಯಕ್ಷ ದೇವರಾಜ್ ಅವರ ನೇತೃತ್ವದಲ್ಲಿ ಮಂಗಳವಾರ ಭೇಟಿಯಾಗಿ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಲಾಯಿತು.

ಈ ವೇಳೆ ಮಾತನಾಡಿದ ಗಿರೀಶ್ ಅವರು, ಕುಡಿಯುವ ನೀರು, ರಸ್ತೆ ಹಾಗು ವಿದ್ಯುತ್ ಸಮಸ್ಯೆಗೆ ಶೀಘ್ರ ಪರಿಹಾರ ಕ್ರಮ ಕೈಗೊಳ್ಳಲಾಗುವುದೆಂದರು.

ರೈತ ಸಂಘದ ತಾಲ್ಲೂಕು ಅಧ್ಯಕ್ಷ ದೇವರಾಜ್ ಅವರು ಮಾತನಾಡಿ, ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಹದಗೆಟ್ಟಿರುವುದರಿಂದ ಶಾಲಾ ಮಕ್ಕಳು, ವೃದ್ಧರು ತೊಂದರೆ ಅನುಭವಿಸುತ್ತಿದ್ದಾರೆ. ನಿರಂತರ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ಕೆಸರುಗುಂಡಿಯಲ್ಲೇ ವಾಹನಗಳು ಓಡಾಡುತ್ತಿದ್ದು ಬೈಕ್ ಸವಾರರು ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೀದಿ ದೀಪಗಳಲ್ಲಿ ಹಾಗು ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲವೆಂದು ಸಮಸ್ಯೆ ಹೇಳಿಕೊಂಡರು.

# ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ದಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ)ಎರಡು ಶೈಕ್ಷಣಿಕ ವರ್ಷದ ನಾಲ್ಕು ಸೆಮಿಸ್ಟರ್ ಸಿ.ಬಿ.ಸಿ.ಎಸ್ ಪದ್ಧತಿ ದೃಶ್ಯ ಕಲೆಯಲ್ಲಿ 2025-26 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಬಿ.ವಿ.ಎ.ಸ್ನಾತಕ ಪದವಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಆಫ್‌ಲೈನ್ ಮುಖಾಂತರ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಸದರಿ ಸ್ನಾತಕೋತ್ತರ ಪದವಿಯಲ್ಲಿ ಚಿತ್ರಕಲೆ ವಿಭಾಗ, ಗ್ರಾಫಿಕ್ಸ್ ವಿಭಾಗ ಮತ್ತು ಶಿಲ್ಪಕಲೆ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕೋತ್ತರ ಪದವಿಯಾಗಿರುತ್ತದೆ. ಪ್ರಥಮ ವರ್ಷದ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ (ಎಂ.ವಿ.ಎ) ಪ್ರವೇಶಾತಿಗಾಗಿ ಚಿತ್ರಕಲೆ ವಿಭಾಗ, ಗ್ರಾಫಿಕ್ಸ್ ವಿಭಾಗ ಮತ್ತು ಶಿಲ್ಪಕಲೆ ವಿಭಾಗಗಳಿಗೆ ಕಚೇರಿಯಿಂದ ಅರ್ಜಿಗಳನ್ನು ಪಡೆದು ಸಲ್ಲಿಸಲು ಆ.30 ರಂದು ಅಂತಿಮ ದಿನಾಂಕವಾಗಿದ್ದು, ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಅರ್ಹತಾ ಹಾಗೂ ವೈಯುಕ್ತಿಕ ಸಂದರ್ಶನದ ಪರೀಕ್ಷೆ ದಿನಾಂಕವನ್ನು ತಿಳಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಈ ಕಾರ್ಯಾಲಯದ ದೂರವಾಣಿ ಸಂಖ್ಯೆ 0821-2438931 ಯನ್ನು ಸಂಪರ್ಕಿಸಲು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಡೀನ್ ತಿಳಿಸಿದ್ದಾರೆ.

# ಕನುವನಘಟ್ಟ ಶಾಲೆಯಲ್ಲಿ ಕೃಷ್ಣಜನ್ಮಾಷ್ಟಮಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಕನುವನಘಟ್ಟ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಅಂಗನವಾಡಿ ಮತ್ತು ಶಾಲೆಯ ಸಹಯೋಗದಲ್ಲಿ ಮಕ್ಕಳಿಗೆ ಶ್ರೀ ಕೃಷ್ಣ ಹಾಗೂ ರಾಧೆಯ ಛದ್ಮವೇಷ ಸ್ಪರ್ಧೆ ಏರ್ಪಡಿಸಲಾಗಿತ್ತು.

ದಿಡಗ ಗ್ರಾಮ ಪಂಚಾಯಿತಿ ಸದಸ್ಯ ಕೆ.ಎನ್. ಹರಿಪ್ರಸಾದ್, ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಪುಟ್ಟರಾಜಮ್ಮ, ಸಹಾಯಕಿ ದ್ರಾಕ್ಷಾಯಿಣಿ, ಶಾಲೆಯ ಮುಖ್ಯ ಶಿಕ್ಷಕಿ ಮಂಜುಳಾ.ಡಿ, ಅಡುಗೆ ಸಿಬ್ಬಂದಿ ಸರಸ್ವತಿ ಹಾಗೂ ಪೋಷ್ಣಕರು ಹಾಜರಿದ್ದರು.

# 5 ಶ್ರೀಗಂಧ ಮರ ಕಳವು

ಚನ್ನರಾಯಪಟ್ಟಣ: ದೇವಸ್ಥಾನ ಆವರಣದಲ್ಲಿದ್ದ 5 ಶ್ರೀಗಂಧದ ಮರಗಳನ್ನು ಕತ್ತರಿಸಿ ಕಳವು ಮಾಡಿರುವ ಘಟನೆ ತಾಲ್ಲೂಕಿನ ಬರಗೂರು ಗೇಟ್ ಸಮೀಪದ ಮಹಾಲಕ್ಷ್ಮೀ ದೇಗುಲದಲ್ಲಿ ನಡೆದಿದೆ.

ದೇವಸ್ಥಾನದ ಜ್ಞಾನ ಮಂದಿರ ಸುತ್ತ ಬೆಳೆದಿದ್ದ ಸುಮಾರು 8 ರಿಂದ 10 ವರ್ಷದ ಗಂಧದ ಮರಗಳನ್ನು ಬೆಳೆಸಲಾಗಿತ್ತು. ದೇವಾಲಯ ಟ್ರಸ್ಟಿ ಅಟ್ಟಾವರ ರಾಮದಾಸ್ ಅವರ ಮರಣದ ನಂತರ ಪುತ್ರಿ ಅಂಜಲಿ ಅಟ್ಟಾವರ ಸಂತೋಷ್ ಅವರು ನಿರ್ವಹಣೆ ಮಾಡುತ್ತಿದ್ದರು. ರಾಮದಾಸ್ ಅವರ ಕಾರು ಚಾಲಕ ಧರಣೇಶ ಅವರೇ ಆಗಾಗ ಬಂದು ಶ್ರೀಗಂಧ ಮರಗಳನ್ನು ನೋಡಿಕೊಂಡು ಹೋಗುತ್ತಿದ್ದರು. ಆ. 16ರ ರಾತ್ರಿ ಬಂದಿರುವ ಕಳ್ಳರು ಗಿಡಗಳನ್ನು ಅರ್ಧ ಕತ್ತರಿಸಿದ್ದಾರೆ. ಒಟ್ಟು 1.50 ಲಕ್ಷ ರೂ. ಮೌಲ್ಯದ ಶ್ರೀಗಂಧ ಕಳುವಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-21

1192: ತರೈನ್‌ನ ಎರಡನೇ ಯುದ್ಧದಲ್ಲಿ ಮೊಹಮ್ಮದ್ ಘೋರಿ, ಪೃಥ್ವಿರಾಜ್ ಚವ್ಹಾನ್ ಅವರನ್ನು ಸೋಲಿಸಿದರು.

1911: ಪ್ಯಾರಿಸ್‌ನ ಲೂವ್ರ್ ಮ್ಯೂಸಿಯಂನಿಂದ ಲಿಯೊನಾರ್ಡೊ ದ ವಿನ್ಸಿಯ ಪ್ರಸಿದ್ಧ ಮೋನಾಲಿಸಾ ಚಿತ್ರ ಕಳ್ಳತನವಾಯಿತು (1913ರಲ್ಲಿ ಪತ್ತೆಯಾಯಿತು).

1957: ಸೋವಿಯತ್ ಯೂನಿಯನ್, ಅಂತರ್ ಖಂಡಾಂತರ ಕ್ಷಿಪಣಿ ಆರ್-7 ಅನ್ನು ಯಶಸ್ವಿಯಾಗಿ ಪರೀಕ್ಷಿಸಿತು.

1968: ಸೋವಿಯತ್ ಯೂನಿಯನ್ ಹಾಗೂ ಅದರ ಮಿತ್ರ ರಾ?ಗಳು ಪ್ರಾಗ್ ಸ್ಪ್ರಿಂಗ್ ದಮನಕ್ಕಾಗಿ ಚೆಕೋಸ್ಲೋವಾಕಿಯಾದ ಮೇಲೆ ದಾಳಿ ನಡೆಸಿದವು.

1991: ಲಾಟ್ವಿಯಾ ಸೋವಿಯತ್ ಯೂನಿಯನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

### ಜನನ

1904: ಕೌಂಟ್ ಬೇಸಿ, ಅಮೇರಿಕದ ಪ್ರಸಿದ್ಧ ಜಾಜ್ ಸಂಗೀತ ನಿರ್ದೇಶಕ

1936: ವಿಲ್ಟನ್ ಫೆಲ್ಡರ್, ಅಮೇರಿಕದ ಸಂಗೀತಗಾರ

### ಮರಣ

1940: ಲಿಯಾನ್ ಟ್ರೋಟ್ಸ್ಕಿ, ರ?ಾದ ಕ್ರಾಂತಿಕಾರಿ ನಾಯಕ

1986: ತೂನ್‌ಕೂ ಅಬ್ದುಲ್ ರಹಮಾನ್, ಮಲೇಷ್ಯಾದ ಮೊದಲ ಪ್ರಧಾನಮಂತ್ರಿ

# ರಾಷ್ಟ್ರೀಯ ಏಕತೆ, ಕೋಮು ಸೌಹಾರ್ದತೆ ಮೂಡಿಸಿದ ಸದ್ಭಾವನಾ ದಿನ

## ತಾಳೂರು ಶಾಲೆಯಲ್ಲಿ ಕಾರ್ಯಕ್ರಮ : ಮಾಜಿ ಪ್ರಧಾನಿ ರಾಜೀವ್ ಗಾಂಧಿ ಜನ್ಮದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಆಲೂರು: ಭಾರತ ಬಹುಧರ್ಮೀಯ ರಾ?ವಾದ್ದರಿಂದ ಎಲ್ಲಾ ಧರ್ಮಗಳ ಭಾರತೀಯರ ನಡುವೆ ರಾಷ್ಟ್ರೀಯ ಏಕತೆ, ಶಾಂತಿ, ಸಹಾನುಭೂತಿ ಮತ್ತು ಕೋಮು ಸೌಹಾರ್ದತೆಯನ್ನು ಉತ್ತೇಜಿಸಲು ಸದ್ಭಾವನಾ ದಿನವನ್ನು ಆಚರಿಸಲಾಗುತ್ತದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಸಹಾಯಕ ಆಯುಕ್ತ ಎಂ. ಬಾಲಕೃ?ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆಲೂರು ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕಿನ ತಾಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸದ್ಭಾವನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಭಾರತದ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಅವರ ಜನ್ಮದಿನಾಚರಣೆಯನ್ನು ದೇಶಾದ್ಯಂತ ರಾಷ್ಟ್ರೀಯ ಸದ್ಭಾವನಾ ದಿನವನ್ನಾಗಿ ಆಚರಿಸಲಾಗುತ್ತದೆ. ಸದ್ಭಾವನ ದಿವಸ್‌ನ ಪ್ರಮುಖ ವಿ?ಯವೆಂದರೆ ವಿವಿಧ ನಂಬಿಕೆಗಳು ಮತ್ತು ಸಂಸ್ಕೃತಿಗಳ ಜನರಲ್ಲಿ ರಾಷ್ಟ್ರೀಯ ಏಕತೆ ಮತ್ತು ಸಾಮಾಜಿಕ ಸದ್ಭಾವನೆಯನ್ನು ಪ್ರೋತ್ಸಾಹಿಸುವುದು. ಭಾರತದಲ್ಲಿ ಸದ್ಭಾವನಾ ದಿನದಂದು ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಸದ್ಭಾವನಾ ದಿವಸ್ ಹಸಿರು, ಪ್ರಕೃತಿಯ ಸೌಂದರ್ಯ, ಪರಿಸರ ಸಂರಕ್ಷಣೆ ಮತ್ತು ಜೀವವೈವಿಧ್ಯ ಸಂರಕ್ಷಣೆಗೆ ಸಂಬಂಧಿಸಿದೆ. ಸದ್ಭಾವನಾ ದಿವಸ್‌ನ ಅನೇಕ ಕಾರ್ಯಕ್ರಮಗಳ ಮುಖ್ಯ ಗುರಿ ಈ ನಿರ್ಣಾಯಕ ಪರಿಸರ ಸವಾಲುಗಳ ಬಗ್ಗೆ ನಾಗರಿಕರಲ್ಲಿ ಪ್ರಜ್ಞೆಯನ್ನು ಉತ್ತೇಜಿಸುವುದಾಗಿದೆ ಎಂದರು.

ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ ಮಾತನಾಡಿ, ಈ ದಿನದಂದು ಸಸಿಗಳನ್ನು ನೆಡುವುದನ್ನು ಸಹ ಪ್ರಸ್ತಾಪಿಸಲಾಗಿದೆ. ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು 1984 ರಿಂದ 1989ರ ವರೆಗೆ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ದೇಶದ ಇತಿಹಾಸದಲ್ಲಿ ಅತ್ಯಂತ ಕಿರಿಯ ಪ್ರಧಾನಿ ರಾಜೀವ್ ಗಾಂಧಿ. ಅವರು ಪ್ರಧಾನಿಯಾದಾಗ ಅವರಿಗೆ 40 ವ?. ಅವರು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಮೊಮ್ಮಗ. ಭಾರತದ ಮೊದಲ ಮಹಿಳಾ ಪ್ರಧಾನಿ ಇಂದಿರಾ ಗಾಂಧಿ ಅವರ ತಾಯಿ. ತಮ್ಮ ತಾಯಿ ಇಂದಿರಾ ಗಾಂಧಿಯವರ ಹತ್ಯೆಯ ನಂತರ ರಾಜೀವ್ ಗಾಂಧಿ ಪ್ರಧಾನಿಯಾದರು. ದೇಶದ ಅತ್ಯಂತ ಕಿರಿಯ ಪ್ರಧಾನಿ ರಾಜೀವ್ ಗಾಂಧಿ, ಭಾರತದೊಳಗೆ ಕೋಮು ಸೌಹಾರ್ದತೆ, ರಾಷ್ಟ್ರೀಯ ಸಮಗ್ರತೆ ಮತ್ತು ಶಾಂತಿಯನ್ನು ಬೆಳೆಸಲು ಶ್ರಮಿಸಿದರು ಮತ್ತು ಪ್ರಪಂಚದ ಉಳಿದ ಭಾಗಗಳಿಗೆ ಸದ್ಭಾವನಾ ರಾಯಭಾರಿ ಎಂದು ಪರಿಗಣಿಸಲ್ಪಟ್ಟರು. ಅವರು ಯುವಕನಾಗಿದ್ದಾಗಿನಿಂದಲೂ ಆಧುನಿಕ ಚಿಂತನೆಯನ್ನು ಹೊಂದಿದ್ದರು ಮತ್ತು ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಉದ್ಯಮಗಳ ಮೂಲಕ ಅಭಿವೃದ್ಧಿ ಹೊಂದಿದ ರಾ?ದ ಪರಿಕಲ್ಪನೆಯನ್ನು ಪ್ರವರ್ತಕರನ್ನಾಗಿ ಮಾಡಿದರು ಎಂದರು.

ತಾಲ್ಲೂಕು ಸಹ ಕಾರ್ಯದರ್ಶಿ ಎಚ್.ಡಿ. ಕುಮಾರ್ ಮಾತನಾಡಿ, ರಾಜೀವ್ ಗಾಂಧಿಯವರು ದೇಶದ ಪ್ರಗತಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದರು. 1986ರಲ್ಲಿ ಭಾರತದಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸುಧಾರಿಸಲು ಮತ್ತು ಹೆಚ್ಚಿಸಲು ಅವರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಾರಂಭಿಸಿದರು. 1986ರಲ್ಲಿ ಅವರು ಆರನೇ ತರಗತಿಯಿಂದ ಹನ್ನೆರಡನೇ ತರಗತಿಯ ವರೆಗೆ ಉಚಿತ ಶಾಲಾ ಶಿಕ್ಷಣವನ್ನು ನೀಡುವ ಮೂಲಕ ಸಮಾಜದ ಗ್ರಾಮೀಣ ಭಾಗವನ್ನು ಸುಧಾರಿಸಲು ಕೇಂದ್ರೀಕೃತ ಸರ್ಕಾರಿ ಶಾಲೆಯಾದ ಜವಾಹರ್ ನವೋದಯ ವಿದ್ಯಾಲಯ ವ್ಯವಸ್ಥೆಯನ್ನು ಸ್ಥಾಪಿಸಿದರು. 1991 ರಲ್ಲಿ ಚುನಾವಣಾ ಪ್ರಚಾರದಲ್ಲಿದ್ದಾಗ ರಾಜೀವ್ ಗಾಂಧಿ ಅವರನ್ನು ಎಲ್‌ಟಿಟಿಇ ಆತ್ಮಹತ್ಯಾ ಬಾಂಬರ್ ಹತ್ಯೆ ಮಾಡಿತು. ಅವರ ಮರಣದ ನಂತರ, ಅವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನವನ್ನು ನೀಡಿ ಗೌರವಿಸಲಾಯಿತು. ರಾಷ್ಟ್ರೀಯ ಸದ್ಭಾವನಾ ದಿವಸ್ ಅಥವಾ ರಾಷ್ಟ್ರೀಯ ಸದ್ಭಾವನಾ ದಿವಸ್, ವೈವಿಧ್ಯಮಯ ಸಮುದಾಯಗಳಲ್ಲಿ ಸೌಹಾರ್ದತೆಯನ್ನು ಬೆಳೆಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟ ದಾರ್ಶನಿಕ ನಾಯಕನ ಪರಂಪರೆಯನ್ನು ಗೌರವಿಸುವುದರಿಂದ ಲಕ್ಷಾಂತರ ಜನರ ಹೃದಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ ಎಂದರು.

ಶಾಲಾ ಮುಖ್ಯ ಶಿಕ್ಷಕ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ, ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಜನ್ಮದಿನವನ್ನು ಸದ್ಭಾವನಾ ದಿವಸ ಎಂದು ಆಚರಿಸಲಾಗುತ್ತದೆ. ಅವರು ಒಬ್ಬ ಪ್ರಮುಖ ರಾಜಕೀಯ ವ್ಯಕ್ತಿ ಮಾತ್ರವಲ್ಲದೆ ಏಕತೆ ಮತ್ತು ಕೋಮು ಸೌಹಾರ್ದತೆಯ ಪ್ರತಿಪಾದಕರೂ ಆಗಿದ್ದರು. ಜಾತಿ, ಮತ ಅಥವಾ ಹಿನ್ನೆಲೆಯನ್ನು ಲೆಕ್ಕಿಸದೆ ಪ್ರತಿಯೊಬ್ಬ ನಾಗರಿಕನೂ ಸಹಬಾಳ್ವೆ ನಡೆಸಬಹುದಾದ ರಾ?ದ ಅವರ ದೃಷ್ಟಿಕೋನವು ಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇದೆ. ಭಾರತದಲ್ಲಿ ಜನರನ್ನು ಒಗ್ಗೂಡಿಸಲು ಅವರು ನಿಜವಾಗಿಯೂ ಬದ್ಧರಾಗಿದ್ದರು. ಎಲ್ಲರೂ ಒಗ್ಗೂಡಿ ಕೆಲಸ ಮಾಡುವುದು ಎ?ು ಮುಖ್ಯ ಎಂಬುದನ್ನು ಅವರು ಅರ್ಥಮಾಡಿಕೊಂಡರು. ವಿವಿಧ ಗುಂಪುಗಳ ಜನರು ಪರಸ್ಪರ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕೆಂದು ಅವರು ಬಯಸಿದ್ದರು. ಇದಕ್ಕಾಗಿ ಅವರು ತುಂಬಾ ಶ್ರಮಿಸಿದ್ದರಿಂದ, ಅವರ ಜನ್ಮದಿನದಂದು ಅವರನ್ನು ಸ್ಮರಿಸಲು ಮತ್ತು ಅವರ ಆಲೋಚನೆಗಳನ್ನು ಅನುಸರಿಸಲು ಜನರನ್ನು ಪ್ರೇರೇಪಿಸಲು ಸದ್ಭಾವನಾ ದಿವಸ್ ಅನ್ನು ರಚಿಸಲಾಯಿತು. ರಾಷ್ಟ್ರೀಯ ಸದ್ಭಾವನಾ ದಿವಸ್ ಏಕತೆ ಮತ್ತು ಸಾಮರಸ್ಯವು ಕೇವಲ ಪರಿಕಲ್ಪನೆಗಳಲ್ಲ, ಬದಲಾಗಿ ಪೋ?ಣೆಯ ಅಗತ್ಯವಿರುವ ಸದ್ಗುಣಗಳು ಎಂಬುದನ್ನು ನೆನಪಿಸುತ್ತದೆ. ಭಾರತದಂತಹ ವೈವಿಧ್ಯಮಯ ರಾ?ದಲ್ಲಿ, ಅಂತಹ ದಿನವನ್ನು ಆಚರಿಸುವುದು ವಿಭಜನೆಗಿಂತ ಭಿನ್ನಾಭಿಪ್ರಾಯಗಳನ್ನು ಆಚರಿಸಬಹುದು ಎಂಬ ಸಂದೇಶವನ್ನು ಬಲಪಡಿಸುತ್ತದೆ. ಈ ದಿನವು ವ್ಯಕ್ತಿಗಳು ಬಾಹ್ಯ ಅಸಮಾನತೆಗಳನ್ನು ಮೀರಿ ನೋಡಲು ಮತ್ತು ನಮ್ಮೆಲ್ಲರನ್ನೂ ಒಟ್ಟಿಗೆ ಬಂಧಿಸುವ ಮಾನವೀಯತೆಯನ್ನು ಗುರುತಿಸಲು ಪ್ರೋತ್ಸಾಹಿಸುತ್ತದೆ ಎಂದರು.

ಹಿರಿಯ ಶಿಕ್ಷಕಿ ವಿ. ರವಿತರವರು ಜಾತಿ, ಪ್ರದೇಶ, ಧರ್ಮ ಅಥವಾ ಭಾ?ಯನ್ನು ಲೆಕ್ಕಿಸದೆ ಭಾರತದ ಎಲ್ಲಾ ಜನರ ಭಾವನಾತ್ಮಕ ಏಕತೆ ಮತ್ತು ಸಾಮರಸ್ಯಕ್ಕಾಗಿ ನಾನು ಕೆಲಸ ಮಾಡುತ್ತೇನೆ ಎಂದು ನಾನು ಈ ಗಂಭೀರ ಪ್ರತಿಜ್ಞೆ ಮಾಡುತ್ತೇನೆ. ಇದಲ್ಲದೆ, ಹಿಂಸಾಚಾರವನ್ನು ಆಶ್ರಯಿಸದೆ ಸಂವಾದ ಮತ್ತು ಸಾಂವಿಧಾನಿಕ ವಿಧಾನಗಳ ಮೂಲಕ ನಮ್ಮ ನಡುವಿನ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಪರಿಹರಿಸುತ್ತೇನೆ ಎಂದು ನಾನು ಪ್ರತಿಜ್ಞೆ ಮಾಡುತ್ತೇನೆ ಎಂದು ಎಲ್ಲರಿಗೂ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕಾರ್ಯಕ್ರಮವನ್ನು ಹಿರಿಯ ಶಿಕ್ಷಕಿ ವಿ.ರವಿತ ನಿರೂಪಿಸಿದರು, ಅತಿಥಿ ಶಿಕ್ಷಕಿ ಎ.ಎಸ್.ರೇಖಾ ಸ್ವಾಗತಿಸಿ, ವಂದಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248